ಎಣಿಸಿದರೆ ನಾವು ಏತಕ್ಕಾಗಿ ಪ್ರಶ್ನೆಯನ್ನು ಕೇಳಬೇಕು. ಆ ಜವಾಬ್ದಾರಿ ಏತಕ್ಕೆ ಬೇಕು, ಆ ಜವಾಬ್ದಾರಿಯನ್ನು ಹೊರತಕ್ಕಂಥವರು ಯಾರು? ಇಲಾಖೆಗೆ ಏನು ಕೆಲಸವಿದೆ. ಎಲ್ಲಿ ಶಾಲೆ ಹಾಗೂ ಕಾಲೇಜುಗಳು ಇವೆ, ಆ ಶಾಲಾಕಾಲೇಜುಗಳಿಗೆ ಮೂಲಭೂತವಾದಂತಹ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗದಿದ್ದರೆ, ಆ ಇಲಾಖೆಯ ಔಚಿತ್ಯವನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಇದರಲ್ಲಿ ರಾಜಕೀಯವಿಲ್ಲ, ಆ ಪಕ್ಷ ಈ ಪಕ್ಷ ಎಂಬ ಭೇದಭಾವವಿಲ್ಲ, ಅಲ್ಲಿರುವಂತಹ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡಬೇಕಾದಂತದ್ದು ಅವರ ಜವಾಬ್ದಾರಿಯಾಗಿರುತ್ತದೆ. ಈ ವಿಷಯದ ಬಗ್ಗೆ ಹಣವಿಲ್ಲವೆಂದು ಕೈಚೆಲ್ಲಿಬಿಟ್ಟರೆ ಹೇಗೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಾವು ಈ ವರ್ಷ ಹಣದ ಇತಿಮಿತಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಒಂದೇ ಬಾರಿ ನಾವು ಪ್ರೈಮರಿ ಶಾಲಾ ಕಟ್ಟಡಗಳನ್ನು ಹಾಗೂ ಪದವಿಪೂರ್ವ ಕಾಲೇಜಿನ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಈ ವರ್ಷ ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆ, ಎಷ್ಟೆಷ್ಟು ಸ್ಪಿಲ್‌ಓವರ್ ವರ್ಕ್ಸ್. ಈ ರಾಜ್ಯದಲ್ಲಿ ಉಳಿದಿದೆ, ಅರ್ಧವಾಗಿದೆ, ಮುಕ್ಕಾಲು ಆಗಿದೆ ಇವುಗಳನ್ನು ಕಂಪ್ಲೀಟ್ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಾವು ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ಕೊಡುವುದಕ್ಕಾಗುವುದಿಲ್ಲ. ಸರ್ಕಾರದಿಂದ ನಾವು ಎಷ್ಟು ಹಣವನ್ನು ಅಧಿಕಾರಿಗಳಿಗೆ ಕೊಡುತ್ತೇವೆಯೋ ಅಧಿಕಾರಿಗಳು ಅದಕ್ಕೆ ಸರಿಯಾಗಿ ಎಸ್ಟಿಮೇಟ್ ಮಾಡಿ, ಪ್ಲಾನ್ ಮಾಡಿ ಕೆಲಸವನ್ನು ಮಾಡುತ್ತಾರೆ. ನಮ್ಮಲ್ಲಿರತಕ್ಕಂತಹ ಹಣದಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್

297 (2050)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗೀ ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಮೆರಿಟ್ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಲಾಗುತ್ತಿದೆಯೇ?

ಆ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಇ) ಸ್ಟೈಫಂಡ್ ನೀಡಿದರೆ ಸರ್ಕಾರದ ಬೊಕ್ಕಸಕ್ಕೆ ಆಗುವ ವೆಚ್ಚ ಎಷ್ಟು?

ಈ) ಸರ್ಕಾರಿ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸ್ಟೈಫಂಡ್ ಮೊತ್ತವೆಷ್ಟು?

ಡಾ. ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಇಲ್ಲಾ

ಆ) ಖಾಸಗೀ ದಂತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿಲ್ಲವಾದ ಕಾರಣ ಇವರಿಗೆ ಸ್ಟೈಫಂಡ್ ನೀಡುತ್ತಿಲ್ಲ.

ಇ) ಹಾಲಿ ದರದ ಹಾಗೂ ಹಾಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ರೂ. 33 ಲಕ್ಷಗಳು ಒಂದು ವರ್ಷಕ್ಕೆ ವೆಚ್ಚ ಆಗುವುದು.

ಈ) ರೂ. 5.5 ಲಕ್ಷಗಳು ಒಂದು ವರ್ಷಕ್ಕೆ ವೆಚ್ಚ ಆಗುವುದು.

ಶ್ರೀ ಎ.ರಾಮದಾಸ್: ಸನ್ಮಾನ್ಯ ಉಪಾಧ್ಯಕ್ಷರೆ, ಸ್ನಾತಕೋತ್ತರ ಪದವಿಯಲ್ಲಿ ಮೆರಿಟ್‌ನಲ್ಲಿ ಪಾಸಾಗುವುದೇ ಈ ರಾಜ್ಯದಲ್ಲಿ ಅವಮಾನದ ಕೆಲಸವೇ ಎಂದು ವಿಚಾರವಾಗುತ್ತದೆ. ಆದರೆ ಉತ್ತರದಲ್ಲಿ ಖಾಸಗಿ ದಂತ ಕಾಲೇಜುಗಳಲ್ಲಿ ಯಾರು ಸ್ನಾತಕೋತ್ತರ ಪದವಿಯಲ್ಲಿ ಮೆರಿಟ್‌ನಲ್ಲಿ ಪಾಸಾಗಿ ಅಲ್ಲಿಗೆ ಹೋಗಿದ್ದಾರೋ ಅಂಥವರಿಗೆ ಸ್ಟೈಫಂಡನ್ನು ಕೊಡುವ ವ್ಯವಸ್ಥೆ ಇಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಇವತ್ತು ಸರ್ಕಾರದ ಬೇರೆಬೇರೆ ಕಾಲೇಜುಗಳಿಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇಂಥಿಂಥ ಕಾಲೇಜುಗಳಿಗೆ ಹೋಗಬೇಕೆಂದು ನಿಯೋಜನೆ ಮಾಡುತ್ತದೆ. ಖಾಸಗಿ ಕಾಲೇಜುಗಳಿಗೆ ಹೋಗುವಂಥದ್ದು ಅವರದೇ ದುರ್ದೈವವಾಗಿದೆ. ಅವರಿಗೆ ಏತಕ್ಕೆ ಸ್ಟೈಫಂಡ್ ಕೊಟ್ಟಿಲ್ಲ ಎಂಬ ಪ್ರಶ್ನೆಗೆ, ಅವರು ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸಮಾಡುವುದಿಲ್ಲ; ಎಂದು ಹೇಳುತ್ತಾರೆ. ಹಾಗಾದರೆ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವವರನ್ನು, ಖಾಸಗಿ ಮ್ಯಾನೇಜ್‌ಮೆಂಟಿನಲ್ಲಿ ಅವರಿಗೆ ಕೊಡಬೇಕಾಂದತಹ ಸ್ಟೈಫಂಡ್‌ನ್ನು ಕಲೆಕ್ಟ್ ಮಾಡಿರುತ್ತಾರೆ. ಸರ್ಕಾರ ಆ ವಿದ್ಯಾರ್ಥಿಗಳಿಗೆ ಸ್ಟೈಫಂಡ್‌ನ್ನು ಕೊಡುವಂತಹ ವ್ಯವಸ್ಥೆಯನ್ನು ಏಕೆ ಮಾಡಿಲ್ಲ? ಈ ಮೆರಿಟ್ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿಲ್ಲವೇ, ಇದರ ಬಗ್ಗೆ ಸರ್ಕಾರ ಯಾವ ರೀತಿ ಕ್ರಮವನ್ನು ಕೈಗೊಳ್ಳುತ್ತದೆಂದು ಕೇಳುವುದಕ್ಕೆ ಬಯಸುತ್ತೇನೆ.

ಡಾ. ಎಂ.ಶಂಕರ್‌ನಾಯಕ್: ಮಾನ್ಯ ಉಪಾಧ್ಯಕ್ಷರೆ, ಸ್ನಾತಕೋತ್ತರ

ವಿದ್ಯಾರ್ಥಿಗಳಾಗಿರಬಹುದು, ಹೌಸ್ ಸರ್ಜನ್‌ಗಳಾಗಿರಬಹುದು ಅವರು ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸವನ್ನು ಮಾಡಿದಾಗ ಅವರಿಗೆ ಸ್ಟೈಫಂಡನ್ನು ಕೊಡಬೇಕೆಂದು ಸರ್ಕಾರದ ತೀರ್ಮಾನವಾಗಿದೆ. ಅವರು ಖಾಸಗಿ ಆಸ್ಪತ್ರೆಯಲ್ಲಿ ಕೆಲಸವನ್ನು ಮಾಡಿದರೆ, ಖಾಸಗಿ ಆಸ್ಪತ್ರೆಯವರು ಸಂಬಂಧಪಟ್ಟವರು ಅವರಿಗೆ ಸ್ಟೈಫಂಡನ್ನು ಕೊಡಬೇಕಾಗುತ್ತದೆ. ಅವರು ಸರ್ಕಾರದ ವಿರುದ್ಧ 1998ರಲ್ಲಿ ಉಚ್ಚನ್ಯಾಯಾಲಯಕ್ಕೆ ಹೋಗಿದ್ದಾರೆ. ನಾವು ಹಿಂದೆ ಪ್ರೈವೇಟ್ ಕಾಲೇಜುಗಳಿಗೆ ಸ್ಟೈಫಂಡನ್ನು ಕೊಡುತ್ತಿದ್ದೆವು. ಅವರಿಗೆ ಸ್ಟೈಫಂಡನ್ನು ಕೊಟ್ಟಿರುವುದು ಸರಿಯಿಲ್ಲವೆಂದು, ಆ ಹಣವನ್ನು ಅವರಿಂದ ರೆಕವರಿ ಮಾಡಿ ಎಂದು ಹೈಕೋರ್ಟಿನಿಂದ ಆರ್ಡರ್ ಆಗಿರುವುದರಿಂದ, ಅವರಿಗೆ ಸ್ಟೈಫಂಡ್ ಹಣವನ್ನು ಕೊಡುತ್ತಿಲ್ಲ. ನಾವು ಹಿಂದೆ ಕೊಟ್ಟಿದ್ದಂತಹ ಸ್ಟೈಫಂಡ್ ಹಣವನ್ನು ರೆಕವರಿ ಮಾಡಿದ್ದೇವೆ.

ಶ್ರೀ ಎ.ರಾಮದಾಸ್: ಮಾನ್ಯ ಸಚಿವರೆ, ತಮ್ಮ ಮೂಲಕ ನಾನು ಅದನ್ನೇ ಕೇಳುತ್ತಿದ್ದೇನೆ, ಸರ್ಕಾರದಿಂದ ಕೊಡಿ ಎನ್ನುವ ಅಪೇಕ್ಷೆ ಏನು ಅಲ್ಲ. ಖಾಸಗಿ ಮ್ಯಾನೇಜ್‌ಮೆಂಟ್‌ಗಳಲ್ಲಿ ಅವರು ಕೆಲಸವನ್ನು ಮಾಡುತ್ತಿರುವುದರಿಂದ, ಮೆರಿಟ್‌ನಲ್ಲಿ ಬಂದಿರುವಂತಹ ವಿದ್ಯಾರ್ಥಿಗಳನ್ನು ತಾವೇ ಆ ಕಾಲೇಜುಗಳಿಗೆ ಕಳುಹಿಸಿರುತ್ತೀರಿ, ಖಾಸಗಿ ಮ್ಯಾನೇಜ್‌ಮೆಂಟಿನಿಂದ ಆ ಒಂದು ಸ್ಟೈಫಂಡ್ ಹಣವನ್ನು ಕಲೆಕ್ಟ್ ಮಾಡಿ ಸರ್ಕಾರದವರು ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡದೆ ಹೋದರೆ ಮೆರಿಟ್‌ನಲ್ಲಿ ಬಂದಂತಹ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ, ಆ ಬಗ್ಗೆ ಸರ್ಕಾರ ಏಕೆ ಯೋಚನೆಯನ್ನು ಮಾಡುತ್ತಿಲ್ಲ ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಡಾ. ಎಂ.ಶಂಕರ್‌ನಾಯಕ್: ನಾವು ಈಗಾಗಲೇ ಆದೇಶವನ್ನು ನೀಡಿದ್ದೇವೆ. ನಾವು ವಿದ್ಯಾರ್ಥಿಗಳಿಂದ ಕಲೆಕ್ಟ್ ಮಾಡಿಕೊಂಡು ಅವರಿಗೆ ಆ ಹಣವನ್ನು ಕೊಡಬೇಕಾಗುತ್ತದೆ. ಅದೇ ಪ್ರಕಾರ ಎಲ್ಲಾ ಖಾಸಗಿ ಕಾಲೇಜುಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ವಿದ್ಯಾರ್ಥಿಗಳಿಂದ ಪ್ರಾರಂಭದಲ್ಲಿ ಹಣವನ್ನು ಪಡೆದುಕೊಂಡು ಸ್ಟೈಫಂಡನ್ನು ಪಿ.ಜಿ.ಗಳಿಗಾಗಲಿ, ಹೌಸ್ ಸರ್ಜನ್‌ಗಳಿಗಾಗಲಿ ಕೊಡಬೇಕು ಎಂದು ನಾವು ಆದೇಶವನ್ನು ನೀಡಿದ್ದೇವೆ.

ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕಡಿಮೆ ಶೇಕಡಾವಾರು ಫಲಿತಾಂಶ.

301 (1973)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಪ್ರಾಥಮಿಕ ಹಾಗೂ